ಉ) ಹೌದು.

ಊ) ಅನುಮತಿ ಪಡೆಯದೇ ಅರಣ್ಯ ಜಮೀನಿಲ್ಲಿ ಕಲ್ಲು ತೆಗೆದಲ್ಲಿ ಕಾನೂನು ಪ್ರಕಾರ ಗುನ್ನೆ ದಾಖಲು ಮಾಡಲಾಗಿದೆ. ಅಧಿಕಾರಿಗಳು ಷಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿನ ಸರ್ಕಾರಿ ಆರೋಗ್ಯ ಕೇಂದ್ರದ ಬಗ್ಗೆ.

2236 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ನಿರ್ಮಾಣವಾಗಿ ಎಷ್ಟು ವರ್ಷಗಳಾದವು? ಈ ಕಟ್ಟಡಕ್ಕೆ ಮಾಡಲಾದ ಒಟ್ಟು ವೆಚ್ಚ ಎಷ್ಟು?

ಆ) ಈ ಆಸ್ಪತ್ರೆಗೆ ಮಂಜೂರಾದ ಒಟ್ಟು ವಿವಿಧ ವರ್ಗದ ಸಿಬ್ಬಂದಿಗಳು ಎಷ್ಟು, ಅದರಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳು ಎಷ್ಟು, ಖಾಲಿ ಇದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು?

ಇ) ಪೂರ್ಣಾವಧಿಯ ವೈದ್ಯರು ಇಲ್ಲಿ ಕೆಲಸ ನಿರ್ವಹಿಸುತ್ತಿರುವರೇ, ಇಲ್ಲವಾದಲ್ಲಿ ಅಲ್ಲಿಗೆ ಪೂರ್ಣಾವಧಿ ವೈದ್ಯರುಗಳನ್ನು ಯಾವಾಗ ನೇಮಿಸಲಾಗುವುದು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕಟ್ಟಡ 94ನೇ ಸಾಲಿನಲ್ಲಿ ಪೂರ್ಣವಾಗಿದೆ. ಅದಕ್ಕೆ ತಗುಲಿದ ವೆಚ್ಚ ರೂ. 6,13, 228.00

ಆ) ಮಂಜೂರಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

		ಮಂಜೂರಾದ ಕೆಲಸ ಹುದ್ದೆಗಳು	*ನಿರ್ವಹಿಸುತ್ತಿರುವ ಹುದ್ದೆಗಳು*	*ಖಾಲಿ ಹುದ್ದೆಗಳು*
1)	ವೈದ್ಯಾಧಿಕಾರಿ	1	1	0
2)	ಫಾರ್ಮಸಿಸ್ಟ್	1	1	0
3)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	9	9	0
4)	ಕಿರಿಯ ಆರೋಗ್ಯ ಸಹಾಯಕ	2	1	1
5)	4ನೇ ದರ್ಜೆ ನೌಕರರು	1	1	-

ಇ) ಕಾಟಿಪಾಳ್ಯ ಆರೋಗ್ಯ ಕೇಂದ್ರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ

2237 - ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವೆಷ್ಟು?

ಆ) ಈ ಅನುಪಾತವನ್ನು ಕೊಪ್ಪಳ ನಗರದಲ್ಲಿರುವ ಶಾಲೆಗಳಲ್ಲಿ ಕಾಯ್ದುಕೊಳ್ಳಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಅನುಪಾತ ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳಾವುವು?

ಈ) ಅನುಪಾತ ಸರಿಪಡಿಸಲು ಕೊಪ್ಪಳ ತಾಲ್ಲೂಕಿನಲ್ಲಿ ಹೆಚ್ಚುವರಿ ಹುದ್ದೆಗಳಿಗೆ ಮಂಜೂರಾತಿ ನೀಡಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತ 1:50

ಆ) ಕೊಪ್ಪಳ ನಗರದಲ್ಲಿ 10,774 ವಿದ್ಯಾರ್ಥಿಗಳಿಗೆ 189 ಶಿಕ್ಷಕರಿದ್ದು ಅನುಪಾತ 1:77 ಇರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ 27,776 ವಿದ್ಯಾರ್ಥಿಗಳಿಗೆ 340 ಶಿಕ್ಷಕರಿದ್ದು ಅನುಪಾತ 1:81 ಇರುತ್ತದೆ.

ಇ) ರಾಜ್ಯಾದ್ಯಂತ ಎಂಟನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಒಟ್ಟು 20,000 ಅಧಿಕ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲಾಗುತ್ತಿರುದ್ದು ಪ್ರಸ್ತುತ 95-96ನೇ ಸಾಲಿಗೆ 5000 ಅಧಿಕ ಹುದ್ದೆಗಳನ್ನು ಮಂಜೂರು ಮಾಡಿದೆ. ಅದರನ್ವಯ ಕೊಪ್ಪಳ ತಾಲ್ಲೂಕನ್ನು ಒಳಗೊಂಡಂತೆ ಅನುಪಾತ ಸರಿಪಡಿಸಲಾಗುವುದು.

ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರ ಭರ್ತಿ

2238 - ಶ್ರೀ ಸಂಗಪ್ಪ ಕರಡಿ ಅಮರಪ್ಪ (ಕೊಪ್ಪಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಖಾಲಿಯಿರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಲಾಗುವುದೆಂದು ಸರ್ಕಾರ ಘೋಷಿಸಿರುವುದು ನಿಜವಲ್ಲವೇ?

ಆ) ಕೊಪ್ಪಳ ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆಯಿರುವುದರಿಂದ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?